# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಂದಾಯ ಅಧಿಕಾರಿಗಳ ಕಛೇರಿ, ಹೊರಮಾವು ಉಪ ವಲಯ,**

**ಮಹದೇವಪುರ ವಲಯ ಬೆಂಗಳೂರು-43.**

ಸಂಖ್ಯೆ.ಬಿಬಿಎಂಪಿ/ಸಕಂಅಹೊಉವ/(ಸಿಬ್ಬಂದಿ)ಪಿಆರ್/204/2020-21 ದಿನಾಂಕ: 07.11.2020

**"07.11.2020ರಂದು ನಡೆದಿರುವ ವಾರ್ಡ್ ಸಮಿತಿ ಸಭೆಯ ನಡವಳಿ-**

ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂಖ್ಯೆ:ಸ.ಅ/ರಾ.ಮೂ.ನ/ಪಿ.ಆರ್/200/2020-21 ದಿನಾಂಕ:05/11/2020 ಹಾಗೂ ನೋಡಲ್ ಅಧಿಕಾರಿ ವಾರ್ಡ್ ನಂ-26 ಮತ್ತು ಕಂದಾಯ ಅದಿಕಾರಿ (ಕೆ.ಆರ್.ಪುರ ವಿಬಾಗ)ರವರು ದಿನಾಂಕ:07/11/2020 ರಂದು ಹೊರಮಾವು ಉಪವಿಭಾಗದ ವಾರ್ಡ್-26 ರ ಕಛೇರಿಯಲ್ಲಿ ಸಭೆಯನ್ನು ಏರ್ಪಡಿಸಲಾಗಿದ್ದು, ಸಭೆಯ ನಡವಳಿಗಳು ಈ ಕೆಳಕಂಡಂತಿರುತ್ತದೆ.

**ಉಪಸ್ಥಿತರು:**

| ಕ್ರ.ಸಂ | ಹೆಸರು | ಹುದ್ದೆ |
|---|---|---|
| 1 | ಶ್ರೀ.ಆರ್ ಬಸವಚಾರಿ | ನೋಡಲ್ ಅಧಿಕಾರಿ ವಾರ್ಡ್ ನಂ-26 ಮತ್ತು ಕಂದಾಯ ಅದಿಕಾರಿ (ಕೆ.ಆರ್.ಪುರ ವಿಬಾಗ) |
| 2 | ಶ್ರೀ. ಚಂದ್ರಶೇಖರ್ | ಸಹಾಯಕ ಕಾರ್ಯಪಾಲಕ ಅಭಿಯಂತರರು |
| 3 | ಶ್ರೀ.ವಿಕ್ರಮ್ ಸಜ್ಜನ್ ಶೆಟ್ಟಿ | ಸಹಾಯಕ ಅಭಿಯಂತರರು ಮತ್ತು ನೋಡಲ್ ಅಧಿಕಾರಿ ವಾರ್ಡ್ ನಂ-26 |
| 4 | ಶ್ರೀ. ವಿಶ್ವನಾಥ್, | ಆರೋಗ್ಯ ಅಧಿಕಾರಿಗಳು, ವಾರ್ಡ್ ಸಂಖ್ಯೆ.26, |
| 5 | ಶ್ರೀ. ಚಂದ್ರಕಲಾ | ಕಿರಿಯ ಆರೋಗ್ಯ ಪರಿವೀಕ್ಷಕರು |
| 6 | ಶ್ರೀ. ಜಯರಾಮ್, | ಕಂದಾಯ ಅಧಿಕಾರಿ |
| 7 | ಶ್ರೀ.ನಾರಯಣಸ್ವಾಮಿ | ಕಂದಾಯ ಅಧಿಕಾರಿ |
| 8 | ಶ್ರೀ. ಆನಂದ | ಎ.ಇ.ಇ (ಬಿ.ಡಬ್ಲ್ಯೂ.ಎಸ್.ಎಸ್.ಬಿ) |
| 9 | ಶ್ರೀ. ವಿನಯ್ ಕುಮಾರ್ | ಕಲ್ಯಾಣ ಶಾಖೆ (ದ್ವಿ.ದ.ಸ) ಮಹದೇವಪುರ |
| 10 | ಶ್ರೀ.ಚಿಟ್ಟಿಬಾಬು, | ಅರಣ್ಯ ಬಿ.ಬಿ.ಎಂ.ಪಿ |
| ವಾರ್ಡ್ ಕಮಿಟಿ ಸದಸ್ಯರುಗಳು ಹಾಗೂ ಸಾರ್ವಜನಿಕರು ರಾಮಮೂರ್ತಿನಗರ-26 | | |
| 13 | ಜಯಂತ್ ಕುಮಾರ್ | ಕೌದೇನಹಳ್ಳಿ |
| 14 | ಗೀತಾ | ಕಲ್ಕೆರೆ |
| 15 | ನಾಗರತ್ನ | ಎನ್.ಆರ್.ಐ ಬಡಾವಣೆ |
| 16 | ವಿನಯ್ ನಾಯ್ಕ | ಕಲ್ಕೆರೆ |
| 17 | ಶೈಲಾ | ಸರ್.ಎಂ.ವಿನಗರ |
| 18 | ರಘು ಪ್ರಸಾದ | ಭೋವಿ ಕಾಲೋನಿ |
| 19 | ಜಗನರಾಜ್ | ಕೌದೇನಹಳ್ಳಿ |
| 20 | ದಿಲಿಪ್ ಕುಮಾರ್ | ಬೋವಿ ಕಾಲೋನಿ |
| 21 | ಮಂಜುನಾಥ | ಕೆ.ಚನ್ನಸಂದ್ರ |
| 22 | ಮುರಳಿ | ಅಂಬೆಡ್ಕರ್ ಕಾಲೋನಿ |
| 13 | ಶ್ರೀ. ಎಲಿಜಬಥ್ | ಬಂಜಾರ ಲೇಔಟ್ |
| 14 | ಶ್ರೀ. ಕೋಟು ಸಂಕಾರ್ | ಟ್ರನಿಟಿ ಎನ್ಕ್ಲೇವ್ |
| 15 | ಶ್ರೀ. ಮಾಲಾ | ಬಂಜಾರ್ ಲೇಔಟ್ |
| 16 | ಶ್ರೀ.ಟಿ.ಜೆ ಅನಿತಾ | ಚನ್ನಸಂದ್ರ ಗ್ರಾಮ |

ಮಾನ್ಯ ನೋಡಲ್ ಅಧಿಕಾರಿ/ಕಂದಾಯ ಅದಿಕಾರಿ (ಕೆ.ಆರ್.ಪುರ ವಿಬಾಗ)ರವರ ಸಮ್ಮುಖದಲ್ಲಿ ಸಭೆಗೆ ಹಾಜರಾದ ಎಲ್ಲಾ ಇಲಾಖೆಯ ಅಧಿಕಾರಿ/ಸಿಬ್ಬಂದಿ ಇತರೆ ಸಂಘ ಸಂಸ್ಥೆಗಳು ಸಾರ್ವಜನಿಕರಿಗೆ ಸುಸ್ವಾಗತ ಕೋರುತ್ತಾ, ಬಿಬಿಎಂಪಿ ವಾರ್ಡ್ ನಂ.26 ರ ವ್ಯಾಪ್ತಿಯಲ್ಲಿ ಅಭಿವೃದ್ದಿ ಕಾರ್ಯ, ಮೂಲಭೂತ ಸೌಕರ್ಯಗಳಾದ ಘನತ್ಯಾಜ್ಯ ವಸ್ತುಗಳ ನಿರ್ವಹಣೆ, ಸಾರ್ವಜನಿಕ ಆರೋಗ್ಯ, ನಗರದ ಸ್ವಚ್ಛತೆ, ರಸ್ತೆ ನಿರ್ವಹಣೆ, ಬೃಹತ್ ನೀರುಗಾಲುವೆಗಳ ನಿರ್ವಹಣೆ, ಬೀದಿ ದೀಪಗಳ ನಿರ್ವಹಣೆ, ಕಲ್ಯಾಣ ಕಾರ್ಯಕ್ರಮಗಳು, 110 ಹಳ್ಳಿಗಳ ವ್ಯಾಪ್ತಿಯಲ್ಲಿ ಬಿಡಬ್ಲೂಎಸ್ಎಸ್‌ಬಿ ರವರು ಕೊಳವೆ ಸಾಲುಗಳ ಅಳವಡಿಸುತ್ತಿರುವ ಸಂಬಂಧ ಹಾಗೂ ಸಾರ್ವಜನಿಕರ ಸಮಸ್ಯೆ ಕುಂದುಕೊರತೆಗಳನ್ನು ಬಗೆಹರಿಸುವಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಎಲ್ಲಾ ಇಲಾಖೆಯ ಅಧಿಕಾರಿ ಹಾಗೂ ಸಾರ್ವಜನಿಕರಿಗೆ ಸುಸ್ವಾಗತ ಕೋರಿ ಸಭೆಯನ್ನು ಆರಂಭಿಸಿದರು.

<u>ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚೆ:-</u>

- <u>ಶ್ರೀ.ಜೆ.ದಿಲೀಪ್:-</u>

  ದಿಲೀಪ್ ರವರು ಮಾತನಾಡಿ ಟಿ.ಸಿ.ಪಾಳ್ಯ ಮುಖ್ಯ ರಸ್ತೆಯ, ಜೋಷ್ವ ಆಸ್ಪತ್ರೆ ಮುಂಬಾಗ ಯು.ಜಿ.ಡಿಯ ನೀರು ರಸ್ತೆಗೆ ಹರಿದು ಬರುತ್ತಿದ್ದು ರಸ್ತೆಯಲ್ಲಿ ಹೋಗುವ ಸಾರ್ವಜನಿಕರಿಗೆ ಓಡಾಡಲು ತುಂಬಾ ಕಷ್ಟಕರವಾಗುತ್ತಿದ್ದು, ಕೂಡಲೇ ಅನುಕೂಲ ಮಾಡಿಕೊಡುವಂತೆ ಸಭೆಯಲ್ಲಿ ತಿಳಿಸಿದರು.

  <u>ಗೀತಾ:-</u>

  ಗೀತಾ ರವರು ಮಾತನಾಡಿ ಆದಿತ್ಯ ಬಡಾವಣೆಯಲ್ಲಿ ಯು.ಜಿ.ಡಿಯ ನೀರು ರಸ್ತೆಗೆ ಹರಿದು ಬರುತ್ತಿದ್ದು ರಸ್ತೆಯಲ್ಲಿ ಹೋಗುವ ಸಾರ್ವಜನಿಕರಿಗೆ ಓಡಾಡಲು ತುಂಬಾ ಕಷ್ಟಕರವಾಗುತ್ತಿದ್ದು, ಕೂಡಲೇ ಅನುಕೂಲ ಮಾಡಿಕೊಡುವಂತೆ ಸಭೆಯಲ್ಲಿ ತಿಳಿಸಿದರು.

  ದಿಲೀಪ್ ಮತ್ತು ಗೀತಾ ರವರ ಮಾತಿಗೆ ಪ್ರತಿಕ್ರಿಯಿಸಿದ ಶ್ರೀ.ಆನಂದ್ ಎ.ಇ.ಇ. (ಬಿ.ಡಬ್ಲ್ಯೂ.ಎಸ್.ಎಸ್.ಬಿ) ಕೂಡಲೇ ರಸ್ತೆಯಲ್ಲಿ ತುಂಬಿರುವ ಯು.ಜಿ.ಡಿಯನ್ನು ಪರಿಶೀಲಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುತ್ತೇವೆಂದು ತಿಳಿಸಿದರು.

  <u>ಶ್ರೀ. ಜಯಂತ್ ಕುಮಾರ್:-</u>

  ಸದಸ್ಯರಾದ ಜಯಂತ್ ಕುಮಾರ್ ರವರು ಮಾತನಾಡಿ ಕಲ್ಕೆರೆ ಮುಖ್ಯ ರಸ್ತೆಯಲ್ಲಿ ಕೇಬಲ್‌ಗಳು ತುಂಬಾ ಆಗಿದ್ದು ರಸ್ತೆಯಲ್ಲಿ ಓಡಾಡುವ ಸಾರ್ವಜನಿಕರಿಗೆ ಓಡಾಡಲು ತುಂಬಾ ಕಷ್ಟಕರವಾಗುತ್ತಿದ್ದು, ಕೂಡಲೇ ಅನುಕೂಲ ಮಾಡಿಕೊಡುವಂತೆ ಸಭೆಯಲ್ಲಿ ತಿಳಿಸಿದರು.

  <u>ಶ್ರೀ.ಮಂಜುನಾಥ:-</u>

  ಸದಸ್ಯರಾದ ಮಂಜುನಾಥ ರವರು ಮಾತನಾಡಿ ಕೆ.ಚನ್ನಸಂದ್ರ ಗ್ರಾಮದ ಪೂಜಗಾರ್ಡ್‌ನ್ ಮುಖ್ಯ ರಸ್ತೆಯು ಯು.ಜಿ.ಡಿ ಮತ್ತು ಕಾವೇರಿ ಪೈಪ್ ಲೈನ್ ಅಳವಡಿಸಲು ರಸ್ತೆಯನ್ನು ಅಗೆದಿದ್ದು ಸಂಪೂರ್ಣ ಹಾಳಾಗಿದ್ದು, ದಿನನಿತ್ಯ ಸಂಚಾರಕ್ಕೆ ಅಡ್ಡಿಯುಂಟಾಗುತ್ತಿದ್ದು, ಸಾರ್ವಜನಿಕರಿಗೆ ಓಡಾಡಲು ತುಂಬಾ ಕಷ್ಟಕರವಾಗುತ್ತಿದ್ದು, ಕೂಡಲೇ ಅನುಕೂಲ ಮಾಡಿಕೊಡುವಂತೆ ಸಭೆಯಲ್ಲಿ ತಿಳಿಸಿದರು.

- ಇದಕ್ಕೆ ಪ್ರತಿಕ್ರಿಯಿಸಿದ ವಾರ್ಡ್ ಅಭಿಯಂತರರು ಶ್ರೀ.ವಿಕ್ರಮ್ ಸಜ್ಜನ್ ಶೆಟ್ಟಿ ರವರು ಮಾತನಾಡಿ ಈಗಾಗಲೇ ಪೂಜಾ ಗಾರ್ಡ್‌ನ್ ರಸ್ತೆಯ ಕಾಮಗಾರಿಯನ್ನು ಕೈಗೆತ್ತಿಕೊಂಡಿದ್ದು, ಅತಿ ಶೀಘ್ರದಲ್ಲಿ ಡಾಂಬರು ರಸ್ತೆ ಮಾಡಿಕೊಡುತ್ತೇವೆ ಎಂದು ಸಭೆಯ ಗಮನಕ್ಕೆ ತರುತ್ತಾ ತಿಳಿಸಿದರು.

- ಶ್ರೀ. ಬಸವರಾಜ್ ಚಾರಿ ರವರು ಮಾತನಾಡಿ ವಾರ್ಡ್ ಸಂಖ್ಯೆ-26ರಲ್ಲಿ ಇರುವ ದಿನ ನಿತ್ಯ ಇರುವ ಕಸದ ಸಮಸ್ಯೆಯನ್ನು ಬಗೆಹರಿಸಲು ಆಯಾ ಆರೋಗ್ಯ ನೀರಿಕ್ಷಕರಿಗೆ ಈಗಾಗಲೇ ತಿಳಿಸಿರುತ್ತೇನೆ ಹಾಗೂ ವಾರ್ಡ್-26ರ ಅಭಿಯಂತರರಾದ ಶ್ರೀ.ವಿಕ್ರಮ್ ಸಜ್ಜನ್ ಶೆಟ್ಟಿ ರವರ ಜೊತೆಗೂಡಿ ಈಗಾಗಲೇ ವಾರ್ಡ್‌ನ್ನು ಪರೀಶಿಲಿಸಿದ್ದು ಅಲ್ಲಿರುವ ಸಮಸ್ಯೆಯನ್ನು ಬಗೆಹರಿಸಲು ತಿಳಿಸಿರುತ್ತೆನೆ ಸಭೆಯು ಗಮನಕ್ಕೆ ತರುತ್ತಾ ಸಭೆಯಲ್ಲಿ ತಿಳಿಸಿದರು ಹಾಗೂ ಸದರಿ ವಿಷಯವನ್ನು ಸಮಿತಿ ಮುಂದೆ ಮಂಡಿಸಿ ನಿಯಾಮಾನುಸಾರ ಕ್ರಮವಹಿಸಲು ಸಭೆಯು ಸರ್ವಾನುಮತದಿಂದ ತಿರ್ಮಾನಿಸಿರುತ್ತದೆ.

ಸಭೆಯನ್ನು ಮುಕ್ತಾಯಗೊಳಿಸುವ ಸಲುವಾಗಿ ಕೊನೆಯದಾಗಿ ಅಧ್ಯಕ್ಷರು ರವರು ನುರಿತ ಸಲಹೆ ಸೂಚನೆಗಳನ್ನು  ಚರ್ಚಿಸಿದ್ದಕ್ಕೆ ಧನ್ಯವಾದಗಳನ್ನು ತಿಳಿಸುತ್ತಾ, ವಾರ್ಡ್‌ನ್ನು ಅಭಿವೃದ್ಧಿಪಡಿಸುವ ಬಗ್ಗೆ ವಾರ್ಡ್ ಮಟ್ಟದಲ್ಲಿ ಕಾರ್ಯಯೋಜನೆಯನ್ನು ರೂಪಿಸಿಕೊಂಡು ಕ್ರಮವಹಿಸುವುದಾಗಿ ತಿಳಿಸುತ್ತಾ,ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

ಶ್ರೀ.ವಿಕ್ರಮ್ ಸಜ್ಜನ್ ಶೆಟ್ಟಿ
ಸಹಾಯಕ ಅಭಿಯಂತರರು ರಾಮಮೂರ್ತಿನಗರ ವಾರ್ಡ್
ಸಂಖ್ಯೆ-26 ಹಾಗೂ ಕಾರ್ಯದರ್ಶಿ ಮತ್ತು ಸಂಚಾಲಕರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

R. Basavaraju 7/11/2020
ನೋಡಲ್ ಅಧಿಕಾರಿ ವಾರ್ಡ್ ಸಂಖ್ಯೆ-26
ಹಾಗೂ ಉಪ-ಆಯುಕ್ತರು
(ಮಹದೇವಪುರ ವಲಯ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:-
1.ಕೌನ್ಸಿಲ್ ಕಾರ್ಯದರ್ಶಿ ರವರ ಅವಗಾಹನೆಗೆ ಮಂಡಿಸಲಾಗಿದೆ.
2.ಕಛೇರಿ ಪ್ರತಿ